## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 425
2. ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 07.12.2023.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | 2023-24ನೇ ಸಾಲಿನಲ್ಲಿ ಗ್ರೂಪ್-ಬಿ ಮತ್ತು ಗ್ರೂಪ್-ಸಿ ವೃಂದದಲ್ಲಿ ಖಾಲಿಯಿರುವ ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಆ | ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನು; | 1. ಇಲಾಖೆಗಳಿಗೆ ನಿಗದಿಪಡಿಸಿದ ಕೆಲಸಗಳನ್ನು ನಿರ್ವಹಿಸಲು ವಿವಿಧ ವೃಂದದ ಹುದ್ದೆ ಮತ್ತು ಹುದ್ದೆಗಳ ವೃಂದಬಲ ನಿಗದಿಪಡಿಸಲಾಗಿದೆ. |
| ಇ | ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು) | 2. ಪ್ರಸುತ ರಾಜ್ಯ ಸರ್ಕಾರದ ಬಹುತೇಕ ಇಲಾಖೆಗಳಲ್ಲಿ ಇ- ಆಡಳಿತ ಮೂಲಕ ಕಡತಗಳ ನಿರ್ವಹಣೆ ಮಾಡಲಾಗುತ್ತಿದೆ ಮತ್ತು ಸಾರ್ವಜನಿಕರಿಗೆ ರಾಜ್ಯ ಸರ್ಕಾರದ ಸೇವೆಗಳನ್ನು ತಲುಪಿಸಲು ಮಾಹಿತಿ ಮತ್ತು ತಂತ್ರಜ್ಞಾನದ (ICT) ಬಳಕೆ ಮಾಡಿಕೊಳ್ಳಲಾಗುತ್ತಿದೆ ಇದರಿಂದ ಸರಳವಾಗಿ ಹಾಗೂ ಸುಲಭವಾಗಿ ಸರ್ಕಾರದ ಸೇವೆಗಳನ್ನು ಪರಿಣಾಮಕಾರಿಯಾಗಿ ಮತ್ತು ಕಾಲಮಿತಿಯೊಳಗೆ ಒದಗಿಸಲು ಸಾಧ್ಯವಾಗುತ್ತದೆ.<br>3. ಅಲ್ಲದೆ, ಹೊಸದಾಗಿ ನೇಮಕವಾಗುವ ಎಲ್ಲಾ ಸಿಬ್ಬಂದಿಗೆ ಕಂಪ್ಯೂಟರ್ ಪರೀಕ್ಷೆಯಲ್ಲಿ ಪಾಸು ಮಾಡುವುದು ಕಡ್ಡಾಯ ಮಾಡಲಾಗಿದೆ.<br>4. ಜೊತೆಗೆ, ಆಡಳಿತ ಸುಧಾರಣ ಆಯೋಗ ಮತ್ತು ವೇತನ ಆಯೋಗವು ಕಾರ್ಯಕಾರಿ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಿ ಪೂರಕ ಸಿಬ್ಬಂದಿ ಅಂದರೆ ಲಿಪಿಕ ವೃಂದದ ಹುದ್ದೆಗಳ ಸಂಖ್ಯೆ ಕಡಿಮೆ ಮಾಡಲು ಹಲವಾರು ಬಾರಿ ಶಿಫಾರಸ್ಸು ಮಾಡಿರುತ್ತದೆ.<br>5. ಮೇಲಿನ ಅಂಶಗಳ ಹಿನ್ನಲೆಯಲ್ಲಿ, ವಿವಿಧ ವೃಂದದ ಹುದ್ದೆ ಮತ್ತು ಹುದ್ದೆಗಳ ವೃಂದಬಲ ಪರಿಷ್ಕರಿಸಬೇಕಾಗುತ್ತದೆ. ಲಿಪಿಕ ವೃಂದದ ಹುದ್ದೆಗಳ ಪೈಕಿ ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ವಾಹನ ಚಾಲಕರು ಮತ್ತು ಗ್ರೂಪ್-ಡಿ ವೃಂದಗಳ ಮತ್ತು ವೃಂದ ಬಲದ ಪರಿಷ್ಕರಣೆ ಬಗ್ಗೆ ಪರಿಶೀಲಿಸಬೇಕಾಗುತ್ತದೆ.<br>6. ಇಲಾಖೆಯಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಎಂದು ಗುರುತಿಸಲಾಗಿದೆ. ಇವುಗಳ ಪೈಕಿ ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಇಲಾಖೆಗಳಿಗೆ ಅಧಿಕಾರವಿರುತ್ತದೆ. ಅಂದರೆ ಆರ್ಥಿಕ ಇಲಾಖೆಯ ಅನುಮತಿ ಅವಶ್ಯಕತೆ ಇರುವುದಿಲ್ಲ. ನೇರ ನೇಮಕಾತಿ ಹುದ್ದೆಗಳಿಗೆ ಸಂಬಂಧಿಸಿದಂತೆ, ಪ್ರತಿ ಇಲಾಖೆಗೆ ನಿಗದಿಪಡಿಸಿರುವ |

| | | |
|---|---|---|
| | | ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅವಶ್ಯವಿರುವ ಸಿಬ್ಬಂದಿಯನ್ನು ಭರ್ತಿ ಮಾಡಲು ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ವೃಂದವಾರು ಪರಿಶೀಲಿಸಿ, ಅನುಮತಿ ನೀಡಲಾಗುತ್ತಿದೆ.<br>7. ಕಲ್ಯಾಣ ಕರ್ನಾಟಕ ಹುದ್ದೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 02 ಬಿಇಎಂ 2021 ರನ್ವಯ ಶೇ. 80 ರಷ್ಟು ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡಿಕೊಳ್ಳಲು ಆಡಳಿತ ಇಲಾಖೆಯ ಹಂತದಲ್ಲಿಯೇ ಪರಿಶೀಲಿಸಿ ನೇಮಕಾತಿ ಮುಂದುವರೆಸಲು ಹಾಗೂ ಶೀಘ್ರಲಿಪಿಗಾರರು, ಬೆರಳಚ್ಚುಗಾರ, ವಾಹನ ಚಾಲಕರು ಮತ್ತು ಗ್ರೂಪ್-ಡಿ ವೃಂದಗಳ ಹುದ್ದೆಗಳನ್ನು ಅನುದಾನದ ಲಭ್ಯತೆಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡಿದೆ.<br>8. ಅನುಕಂಪ ಆಧಾರದ ನೇಮಕಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ನೇಮಕಾತಿ ಆದೇಶ ನೀಡಲು ಸುತ್ತೋಲೆ ಸಂಖ್ಯೆ: ಆಇ 05 ಬಿಇಎಂ 2020, ದಿನಾಂಕ 12.01.2021ರನ್ವಯ ಸಹಮತಿ ನೀಡಿದೆ.<br>9. ಬ್ಯಾಕ್ ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 02 ಬಿಇಎಂ 2021 ದಿನಾಂಕ 4.07.2022ರ ಸೂಚನೆಯನ್ವಯ ಕ್ರಮಕೈಗೊಳ್ಳಲು ತಿಳಿಸಿದೆ.<br>10. ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದರೂ ಸಹ ಇಲಾಖೆಗಳಿಂದ ಬರುವ ಪ್ರಸ್ತಾವನೆಗಳನ್ನು ಪ್ರಕರಣವಾರು ಪರಿಶೀಲಿಸಿ, ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ, ಅಗತ್ಯತೆಗೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ಸಹಮತಿ ನೀಡಲಾಗುತ್ತಿದೆ.<br>11. ಈಗಾಗಲೇ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ 15,000 ಪಧವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಾಗೂ ಬಿಬಿಎಂಪಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ 24005 ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>12. ಸಿಆಸು ಇಲಾಖೆಯ ದಿನಾಂಕ: 26.07.2005ರ ಸುತ್ತೋಲೆ ಅನ್ವಯ ಗ್ರೂಪ್-ಸಿ ವೃಂದದ ಕೆಲವು ಹುದ್ದೆ (ಶೀಘ್ರಲಿಪಿಗಾರರು, ಬೆರಳಚ್ಚುಗಾರರು ಮತ್ತು ವಾಹನ ಚಾಲಕರು ಮತ್ತು ಗ್ರೂಪ್-ಡಿ ವೃಂದಗಳನ್ನು) ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ತಿಳಿಸಲಾಗಿದೆ. ಅದರಂತೆ, ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಎದುರಾಗಿ, ಅಂದಾಜು 75474 ಹುದ್ದೆಗಳನ್ನು (ಶೀಘ್ರಲಿಪಿಗಾರರು, ಬೆರಳಚ್ಚುಗಾರರು ವಾಹನ ಚಾಲಕರು ಮತ್ತು ಗ್ರೂಪ್-ಡಿ ಇತರೆ ಸಿಬ್ಬಂದಿಗಳನ್ನು) ಹೊರಗುತ್ತಿಗೆ/ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ. |

ಸಂಖ್ಯೆ: ಆಇ 65 ಬಿಜಿಎಲ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ

| ಅನುಬಂಧ | | | | |
|---|---|---|---|---|
| 2023-24ನೇ ಸಾಲಿನಲ್ಲಿ ಗ್ರೂಪ್-ಬಿ ಮತ್ತು ಗ್ರೂಪ್-ಸಿ ವೃಂದದಲ್ಲಿ ಖಾಲಿಯಿರುವ ಹುದ್ದೆಗಳ ವಿವರ | | | | |
| ಕ್ರ.ಸಂ. | ಇಲಾಖೆಗಳು | ಖಾಲಿ ಇರುವ ಹುದ್ದೆಗಳು | | |
| | | ಗ್ರೂಪ್-ಬಿ | ಗ್ರೂಪ್-ಸಿ | ಒಟ್ಟು |
| 1 | ಕೃಷಿ | 2868 | 2288 | 5156 |
| 2 | ಪಶುಸಂಗೋಪನೆ | 29 | 3051 | 3080 |
| 3 | ಹಿಂದುಳಿದ ವರ್ಗಗಳ ಕಲ್ಯಾಣ | 131 | 1435 | 1566 |
| 4 | ಸಹಕಾರ | 265 | 3322 | 3587 |
| 5 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 241 | 3749 | 3990 |
| 6 | ಇ - ಆಡಳಿತ | 25 | 3 | 28 |
| 7 | ಪರಿಸರ ಮತ್ತು ಜೀವಿಶಾಸ್ತ್ರ (*) | -2 | 3 | 1 |
| 8 | ಇಂಧನ | 60 | 86 | 146 |
| 9 | ಆರ್ಥಿಕ | 461 | 6241 | 6702 |
| 10 | ಮೀನುಗಾರಿಕೆ | 59 | 40 | 99 |
| 11 | ಆಹಾರ ಮತ್ತು ನಾಗರೀಕ ಸರಬರಾಜು | 94 | 918 | 1012 |
| 12 | ಅರಣ್ಯ | 155 | 4224 | 4379 |
| 13 | ಕೈಮಗ್ಗ ಮತ್ತು ಜವಳಿ | 2 | 29 | 31 |
| 14 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 1220 | 18435 | 19655 |
| 15 | ಉನ್ನತ ಶಿಕ್ಷಣ | 104 | 4091 | 4195 |
| 16 | ಒಳಾಡಳಿತ | 654 | 18898 | 19552 |
| 17 | ತೋಟಗಾರಿಕೆ (*) | -64 | -196 | -260 |
| 18 | ವಾರ್ತೆ | 12 | 185 | 197 |
| 19 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 20 | 23 | 43 |
| 20 | ಕನ್ನಡ ಮತ್ತು ಸಂಸ್ಕೃತಿ | 60 | 170 | 230 |
| 21 | ಕಾರ್ಮಿಕ | 74 | 1230 | 1304 |
| 22 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 202 | 113 | 315 |
| 23 | ಭಾರಿ ನೀರಾವರಿ (*) | -3 | 302 | 299 |
| 24 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 79 | 189 | 268 |
| 25 | ಗಣಿ | 115 | 363 | 478 |
| 26 | ಸಣ್ಣ ನೀರಾವರಿ | 137 | 649 | 786 |
| 27 | ಅಲ್ಪಸಂಖ್ಯಾತರ ಕಲ್ಯಾಣ | 245 | 1048 | 1293 |
| 28 | ಸಂಸದೀಯ ವ್ಯವಹಾರಗಳು | 8 | 322 | 330 |
| 29 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 119 | 636 | 755 |
| 30 | ಲೋಕೋಪಯೋಗಿ (*) | -120 | 1268 | 1148 |
| 31 | ಕಂದಾಯ | 473 | 6701 | 7174 |
| 32 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 831 | 8081 | 8912 |

| | | | | |
|---|---|---|---|---|
| 33 | ಪರಿಶಿಷ್ಟ ಜಾತಿಗಳ ಕಲ್ಯಾಣ | 80 | 1993 | 2073 |
| 34 | ಪರಿಶಿಷ್ಟ ಪಂಗಡಗಳ ಕಲ್ಯಾಣ | 10 | 734 | 744 |
| 35 | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 6666 | 50124 | 56790 |
| 36 | ರೇಷ್ಮೆ | 262 | 2387 | 2649 |
| 37 | ಕೌಶಲ್ಯ ಅಭಿವೃದ್ಧಿ , ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 429 | 2514 | 2943 |
| 38 | ಸಣ್ಣ ಕೈಗಾರಿಕೆ | 67 | 247 | 314 |
| 39 | ಪ್ರವಾಸೋದ್ಯಮ | 36 | 216 | 252 |
| 40 | ಸಾರಿಗೆ | 267 | 1063 | 1330 |
| 41 | ನಗರಾಭಿವೃದ್ಧಿ | 97 | 454 | 551 |
| 42 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 152 | 2144 | 2296 |
| 43 | ಯುವಜನ ಸೇವೆಗಳು | 7 | 100 | 107 |
| **ಒಟ್ಟು** | | **16627** | **149873** | **166500** |

ಟಿಪ್ಪಣಿ (*) - ಹುದ್ದೆಗಳ ತಾತ್ಕಾಲಿಕ ಉನ್ನತೀಕರಣ/ನಿಮ್ನೀಕರಣದಿಂದ ಖಾಲಿ ಇರುವ ಹುದ್ದೆಗಳ ವೃಂದ ಬಲದಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ.